ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರವರ ಕಛೇರಿ, ಕುವೆಂಪುನಗರ ಉಪವಿಭಾಗ,
ಚಾವಿಸನಿನಿ, ಜೋಡಿ ಬಸವೇಶ್ವರ ರಸ್ತೆ, ಮೈಸೂರು.
Telephone No.: 0821-2560803

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
*Assistant Executive* Engineer (El)
CESC, Kuvempunagara Sub-Division,
Jodi Basaveswara Road, Mysuru.
Web Site: www.cescmysore.org
E-mail ID : aeekmp1@cescmysore.org

Company Identity Number[CIN]: U40109KA2004SGC035177

ಕ್ರಮಾಂಕ: ಸ.ಕಾ.ನಿ.ಇಂ(ವಿ)/ಸ.ಇಂ(ತಾಂ)/ಕು.ನ/ಉ.ವಿ/2020-21/2777 ದಿನಾಂಕ: 3-3-2021

# ಸಭಾ ನಡಾವಳಿ

ದಿನಾಂಕ: 03-03-2021 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು ರವರ ಅಧ್ಯಕ್ಷತೆಯಲ್ಲಿ ಕುವೆಂಪುನಗರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ. ಈ ಕೆಳಕಂಡ ಅಧಿಕಾರಿಗಳು/ಗ್ರಾಹಕರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

**ಅಧಿಕಾರಿಗಳು:**

ಶ್ರೀ/ಶ್ರೀಮತಿ

| | | |
|---|---|---|
| 1. | ಚಿಕ್ಕಸಿದ್ದೇಗೌಡರು | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ, ಚಾ.ವಿ.ಸ.ನಿ.ನಿ., ಮೈಸೂರು |
| 2. | ಎಂ.ಪಿ ಪ್ರಶಾಂತ್, | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು. |
| 3. | ಸವಿತಾ ಸಿ | ಸಹಾಯಕ ಇಂಜಿನಿಯರ್ (ತಾಂತ್ರಿಕ) |
| 4. | ಎಸ್.ಕೆ, ಮಧುಸೂದನ | ಸಹಾಯಕ ಲೆಕ್ಕಾಧಿಕಾರಿ, ಕಂದಾಯ ಶಾಖೆ |
| 5. | ಆರ್. ಮದನ್ | ಸಹಾಯಕ ಇಂಜಿನಿಯರ್(ವಿ), ಅರವಿಂದ ಶಾಖೆ |
| 6. | ಹರೀಶ್ | ಸಹಾಯಕ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ |
| 7. | ಡಿ. ಜಯರಾಮು | ಕಿರಿಯ ಇಂಜಿನಿಯರ್(ವಿ), ನಿವೇದಿತಾ ಶಾಖೆ |

**ಗ್ರಾಹಕರು/ ವಿದ್ಯುತ್ ಗುತ್ತಿಗೆದಾರರು**

1. ಶ್ರೀ ಬೋಗನಂದೀಶ್, ವಿದ್ಯುತ್ ಗುತ್ತಿಗೆದಾರರು
2. ಶ್ರೀ ಗುಂಡಪ್ಪ ಗ್ರಾಹಕರು.
3. ಶ್ರೀ ಲೋಕೇಶ್, ವಕೀಲರು.

ಮೊದಲಿಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಕೆ.ಇ.ಆರ್.ಸಿ. ನಿಯಮಾವಳಿಯ ಅನ್ವಯ ಪ್ರತಿ 3 ತಿಂಗಳಿಗೊಮ್ಮೆ ಎಲ್ಲಾ ಉಪವಿಭಾಗಗಳಲ್ಲಿ ಜನಸಂಪರ್ಕ ಸಭೆಯನ್ನು ನಡೆಸುತ್ತಿರುವುದಾಗಿ ತಿಳಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

Scanned by CamScanner

ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರು/ಗುತ್ತಿಗೆದಾರರು ಭಾಗವಹಿಸಿದ್ದು, ಈ ಕೆಳಕಂಡ ಗ್ರಾಹಕರು ತಮ್ಮ ಸಲಹೆಗಳು ಹಾಗೂ ಅವರ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ.

| ಕ್ರ.ಸಂ. | ಗ್ರಾಹಕರ ಹೆಸರು | ತಿಳಿಸಿದ ಸಮಸ್ಯೆ | ತೆಗೆದುಕೊಂಡ ಕ್ರಮ |
|---|---|---|---|
| 1 | ಶ್ರೀ ಭೋಗನಂದೀಶ್, ಗುತ್ತಿಗೆದಾರರು 9743661499 | 1. ಸರಸ್ವತಿಪುರಂ, ಸಮತಂತು ಪಾರ್ಕ್ ಒಳಗೆ ಜಿ.ಐ ಪೈಪ್ ಮತ್ತು ಸರ್ವಿಸ್ ಮೇನ್ ಎಲ್ಲಾ ಅಲ್ಲೇ ಬಿದ್ದಿರುವುದರಿಂದ, ಅವುಗಳನ್ನು ತೆರವುಗೊಳಿಸುವ ಬಗ್ಗೆ ಕೋರಿರುತ್ತಾರೆ.<br>2. ರಸ್ತೆ ಬದಿಯ ಕಲ್ಲಿನಲ್ಲಿ ಆರ್.ಎಂ.ಯು ಮತ್ತು ಫೀಡರ್ ನಾಮಫಲಕಗಳನ್ನು ಕೆಲವು ಕಡೆ ಇಂಗ್ಲೀಷ್‌ನಲ್ಲಿ ಮಾತ್ರ ನಮೂದಿಸಿರುತ್ತಾರೆ. ಆದುದರಿಂದ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ನಾಮಫಲಕವನ್ನು ಬರೆಸುವುದರ ಬಗ್ಗೆ ಚರ್ಚಿಸಿದರು. | 1. ಕಾ.ನಿ.ಇಂ(ವಿ) ರವರು ಎರಡು ದಿನಗಳ ಒಳಗಾಗಿ ಭೂಮಿಮಟ್ಟಕ್ಕೆ ಜಿ.ಐ ಪೈಪ್ ಮತ್ತು ಸರ್ವಿಸ್ ಮೇನ್ ಕಟ್‌ಮಾಡಿ ತಂದು ಸ್ಟೋರ್‌ಗೆ ಹಾಕುವುದಾಗಿ ಶಾಖಾಧಿಕಾರಿಗಳಿಗೆ ಸೂಚಿಸಿದರು.<br>2. ಕಾ.ನಿ.ಇಂ(ವಿ) ರವರು ಆರ್.ಎಂ.ಯು ಮತ್ತು ಫೀಡರ್ ನಾಮಫಲಕಗಳನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ನಾಮಫಲಕಗಳನ್ನು ಬದಲಿಸುವುದಾಗಿ ಹೇಳಿಕೆ ನೀಡಿದರು. |
| 2 | ಶ್ರೀ ಗುಂಡಪ್ಪ ಗ್ರಾಹಕರು ಮತು ಶ್ರೀ ಲೋಕೇಶ್, ವಕೀಲರು. | ಶ್ರೀಮತಿ ಪುಟ್ಟಚನ್ನಮ್ಮ, #110/5ಸಿ, ಚಿನ್ನಗಿರಿಕೊಪ್ಪಲು, ಕೆ.ಬ್ಲಾಕ್, ಮೈಸೂರು. ರವರ ನಿವೇಶನಕ್ಕೆ ವಿದ್ಯುತ್ ಸಂಪರ್ಕ ನೀಡಲು ಜಾಗಕ್ಕೆ ಸಂಬಂಧಪಟ್ಟಂತೆ ದಾವೆ ಹೂಡಿರುವ ಬಗ್ಗೆ. | ಕಾ.ನಿ.ಇಂ(ವಿ) ರವರು ನಮ್ಮ ಸಂಸ್ಥೆಯ ಕಾನೂನುಬದ್ಧ ನಿಯಮದಂತೆ ಅನುಮತಿ ಪಡೆದ ನಂತರ ಸೂಕ್ತಕ್ರಮ ವಹಿಸಲು ಸೂಚಿಸಲಾಯಿತು. ಅಥವಾ ವಿದ್ಯುತ್ ಸಂಪರ್ಕ ಅವಶ್ಯಕತೆ ಇದ್ದಲ್ಲಿ ತಾತ್ಕಲಿಕ ವಿದ್ಯುತ್ ಸಂಪರ್ಕ ನೀಡಬಹುದಾಗಿರುತ್ತದೆ ಎಂದು ಸ.ಕಾ.ನಿ.ಇಂ(ವಿ) ರವರು ತಿಳಿಸಿದರು. |

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ರವರು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಿದರು. ಕುವೆಂಪುನಗರ ಉಪವಿಭಾಗದ ಗ್ರಾಹಕರ ಕುಂದುಕೊರತೆಗಳನ್ನು ನಿಗಧಿತ ಸಮಯದೊಳಗೆ ಸರಿಪಡಿಸಲು ಸೂಚಿಸಿದರು.

ಮುಂದುವರೆದು ಕುವೆಂಪುನಗರ ಉಪವಿಭಾಗದ ವ್ಯಾಪ್ತಿಯಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಇದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ ರವರಿಗೆ ದೂರವಾಣಿ ಮೂಲಕ ಅಥವಾ ಕಛೇರಿಗೆ ಬಂದು ತಿಳಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು

ಪ್ರತಿಯನ್ನು,

1. ಅಧೀಕ್ಷಕ ಇಂಜಿನಿಯರ್(ವಿ), ಕಾ.ಮತ್ತು ಪಾ.ವೃತ್ತ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು, ಸರಸ್ವತಿಪುರಂ ಶಾಖೆ, ಅರವಿಂದ ಶಾಖೆ, ನಿವೇದಿತ ಶಾಖೆ, ಕಂದಾಯ ಶಾಖೆ, ತಾಂತ್ರಿಕ ಶಾಖೆ, ಕುವೆಂಪುನಗರ ಉಪವಿಭಾಗ, ಚಾವಿಸನಿನಿ., ಮೈಸೂರು ರವರಿಗೆ.

ಪ್ರ.ಕ.

Scanned by CamScanner